MVC 424/19 Pw-1

**<u>ದಿಃ 08-10-2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮಧ್ಯಂತರ ಅರ್ಜಿ ಸಂಖ್ಯೆ 5 ಮತ್ತು 6 ರ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯ</u>**

**<u>ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ ಆರ್ ಎಸ್ ವಕೀಲರಿಂದ</u>**

ನಾನು ಈ ದಿನ ದಿನಾಂಕಃ**21-01-2024** ರಂದು ಕರ್ನಾಟಕ ವಾಲಿಬಾಲ್ ಅಸೋಸಿಯೇಶನ್ ರವರು ನನಗೆ ನೀಡಿದಂತಹಾ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು **<u>ನಿಪಿ-19</u>** ಎಂದು ಗುರುತಿಸಲಾಯಿತು.

ದಿನಾಂಕಃ**01-11-2018** ರಿಂದ **30-11-2018** ರ ವರೆಗೆ ನಾನು ನಮ್ಮ ಇಲಾಖೆಯಲ್ಲಿ ಗಳಿಕೆ ರಜೆಯನ್ನು ಪಡೆದುಕೊಂಡ ಬಗ್ಗೆ ಇನ್ ಕಂ ಟ್ಯಾಕ್ಸ ಹೈದ್ರಾಬಾದ್ ಡಿಪಾರ್ಟಮೆಂಟ್ ರವರು ನೀಡಿದ ಪತ್ರವನ್ನು ಹಾಜರುಪಡಿಸುತ್ತಿದ್ದು, ಅದನ್ನು **<u>ನಿಪಿ-20</u>** ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲು: 2** ನೇ ಎದುರುದಾರ ಪರ ವಕೀಲರಾದ ಶ್ರೀ ಎನ್ ಪಿ ಎನ್ ರವರಿಂದ</u>

ನಿಪಿ-**19** ದಾಖಲಾತಿಯನ್ನು ನಾನು ದಿಃ**18-01-2024** ರಂದು ನಾನು ನೀಡಿದ ಕೋರಿಕೆ ಪತ್ರದ ಆಧಾರದ ಮೇಲೆ ನನಗೆ ನೀಡಲಾಗಿತ್ತು ಎಂದರೆ ಸರಿ. ಆ ಪತ್ರದಲ್ಲಿ

ನಾನು **Non Performing Standard** ಇದ್ದ ಕಾರಣ ನನಗೆ ತಂಡಕ್ಕೆ ಆಯ್ಕೆ ಮಾಡಿಲ್ಲ ಅಂತ ಕಾಣಿಸಿದ್ದಾರೆ ಎಂದರೆ ಸರಿ. ಸದ್ರಿ ದಾಖಲಾತಿಯಲ್ಲಿ ಎಲ್ಲಿಯೂ ನನ್ನ ದೈಹಿಕ ನ್ಯೂನ್ಯತೆಯಿಂದ ನಾನು ತಂಡಕ್ಕೆ ಆಯ್ಕೆಯಾಗಿಲ್ಲ ಎಂದು ಕಾಣಿಸಿಲ್ಲ ಎಂದರೆ ಸರಿ. ನಿಪಿ-20 ರಲ್ಲಿ ಕಾಣಿಸಿದ ದಿನಾಂಕವನ್ನು ತಿದ್ದಿದಂತೆ ಕಾಣುತ್ತದೆ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನಿಪಿ-20 ದಾಖಲಾತಿಯಲ್ಲಿ ನನ್ನ ಪೇ ಸ್ಕೇಲ್ ಎಷ್ಟಿದೆ ಅಂತ ಕಂಡು ಬರುತ್ತದೆ ಎಂದರೆ ಸರಿ. ಸದ್ರಿ ದಾಖಲಾತಿಯಲ್ಲಿ ನನ್ನ ವೇತನ ರೂ:29,700-00 ಅಂತ ಕಾಣಿಸಲಾಗಿದೆ ಎಂದರೆ ಸರಿ. ಈ ದಾಖಲಾತಿಯನ್ನು ನನಗೆ ನೀಡಿದ ವ್ಯಕ್ತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಅವರ ಸಾಕ್ಷ್ಯ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ನಿಪಿ-20 ಗಳಿಕೆ ರಜಾ ಅರ್ಜಿಯನ್ನು ನಾನೇ ತುಂಬಿ ಅದನ್ನು ನಮ್ಮ ಇಲಾಖೆಯವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದರಲ್ಲಿ ದಿ:01-11-2018 ರಿಂದ 30-11-2018 ರ ವರೆಗೆ ಗಳಿಗೆ ರಜೆ ಬೇಕು ಅಂತ ನಾನು ರಜಾ ಅರ್ಜಿಯಲ್ಲಿ ಕಾಣಿಸಿದ್ದೇನೆ ಎಂದರೆ ಸರಿ. ಸದ್ರಿ ಗಳಿಕೆ ರಜೆಯನ್ನು ನಾನು ವೈದ್ಯಕೀಯ ಚಿಕಿತ್ಸೆಗಾಗಿ ಪಡೆದುಕೊಂಡಿದ್ದೇನೆ. ನಿಪಿ-20 ನ್ನು ಈ ಪ್ರಕರಣಕ್ಕಾಗಿ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿ ಅಲ್ಲಾ. ಬೇರೆ ಯಾವುದೋ ವಿಚಾರಕ್ಕೆ ಪಡೆದುಕೊಂಡ ಗಳಿಕೆ ರಜೆಯನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಅದರ ಪ್ರಯೋಜನ ಪಡೆಯಲು ಅದರಲ್ಲಿ ಇದ್ದ ದಿನಾಂಕವನ್ನು ತಿದ್ದಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ ಅಲ್ಲಾ. ನಿಪಿ-19 ಮತ್ತು 20 ದಾಖಲೆಗಳು ನೈಜವಾದ ಮತ್ತು ನ್ಯಾಯ ಸಮ್ಮತವಾದ ದಾಖಲೆ ಆಗಿರುವುದಿಲ್ಲ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆ:** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**